ಒತ್ತಾಯಿಸುತ್ತಿದ್ದಾರೆ ಸಾರ್. ನಾವಾದರೂ ಕೇಸ್ ಮಾಡಿ ಎಲ್ಲಿಗೆಂತ ಹೋಗುವುದು. ಅದು ಹೆಣ್ಣಿಗೂ ಸುಮ್ಮನೆ ಹೆಸರಲ್ವಾ?'

ನನಗೆ ಉರಿದು ಹೋಯಿತು. 'ಅಲ್ಲ ಮಾರ್ರೆ ಮಗಳ ರೇಪ್ ಆಗಿದೆ ನಿಮಗೆ ಸ್ವಲ್ಪನಾದ್ರೂ ತಿಳಿವಳಿಕೆ ಇಲ್ವಲ್ಲ. ಕೇಸ್ ಹಿಂಪಡೆಯುವುದಕ್ಕೆ ಅವರೇನಾದ್ರೂ ಕೊಡ್ತಾರೆ ಅಂದ್ರಾ?'

'ಹೌದು ಸಾರ್. ಕೇಸ್‌ನಲ್ಲಿ ಮುಂದೆ ಹೋಗಲು ಹಣವಾದ್ರೂ ಬೇಡ್ವಾ. ಆಸ್ಪತ್ರೆಗೆ ಕಟ್ಟಲೇ ಹಣವೇ ಇಲ್ಲ. ಮಗಳಿಗೆ ಹೀಗಾಯಿತೂಂತ ದೊಡ್ಡವರಿಗೆ ವಿರುದ್ಧವಾಗಿ ನಿಲ್ಲೋಕಾಗುತ್ತಾ ಸಾರ್' ಅವನು ದಯನೀಯವಾಗಿ ಬೇಡಿಕೊಂಡ.

'ನೋಡಿ ನಿಮ್ಮ ಮಗಳಿಗೆ ಅನ್ಯಾಯವಾಗಿದೆ. ಕೇಸು ಹಿಂಪಡೆದರೆ ನಿಮ್ಮ ಮಗಳಿಗೆ ಆದ ನೋವಿಗೆ ನ್ಯಾಯ ಸಿಗುತ್ತದಾ? ನಿಮ್ಗೆ ಆಗುವ ಸಹಾಯ ನಾನು ಮಾಡ್ತೇನೆ' ಅವನಿಗೆ ಅಶ್ವಾಸನೆ ಕೊಟ್ಟೆ.

'ಸಾರ್... ಸಹಾಯ ಮಾಡುತ್ತಾರಂತ ಎಲ್ಲರೂ ಹೇಳುತ್ತಾರೆ. ಕೊನೆಗೆ ನಮ್ಮ ಕಷ್ಟಕ್ಕೆ ನಾವೇ ಹೊಣೆ' ಅಂದ ನಿಟ್ಟುಸಿರುಡುತ್ತಾ.

'ನಿಮ್ಮ ಮಗಳಿಗಾದ ಕಷ್ಟ ಬೇರೆಯವರಿಗೆ ಆಗದಿರಲಿ ಅಂತ ಹೇಳ್ತಾ ಇರೋದು. ಅರ್ಥ ಮಾಡಿಕೊಳ್ಳಿ' ಅಂತ ಗದರಿಸುವಂತೆ ಜೋರು ಮಾಡಿದೆ. ಅಷ್ಟರಲ್ಲಿ ಆಫೀಸಿನಿಂದ ನಮ್ಮ ಹೆಸರಿನ ಕರೆ ಬಂತು.

ಅವನು ಹೆಬ್ಬೆಟ್ಟ್ ಒತ್ತಿ ಫಾರಂನ್ನು ಹಿಂತಿರುಗಿಸಿದ. ಅಲ್ಲಿಂದ ಎರಡನೇ ಬ್ಲಾಕ್ ಹೋಗಿ ಅಂದರು. ನಾವು ಬ್ಲಡ್ ಬ್ಯಾಂಕಿಗೆ ಹೋಗಿ ರಕ್ತ ಪಡೆದುಕೊಂಡು ಹಿಂತಿರುಗಿ ಬಂದೆವು. ಅವನು ಬರುವ ದಾರಿಯಲ್ಲಿ ಆಗಾಗ್ಗೆ ಪೋನಿನಲ್ಲಿ ಮಾತನಾಡುತ್ತಲೇ ಇದ್ದ.

ನಾವು ಆಸ್ಪತ್ರೆ ತಲುಪಿ ರಕ್ತವನ್ನು ಕೊಟ್ಟೆವು. ಡಾಕ್ಟರ್ ನಮಗಾಗಿಯೇ ಕಾಯುತ್ತಿದ್ದವರು ನಮ್ಮಿಂದ ರಕ್ತ ಪಡೆದುಕೊಂಡು ತರಾತುರಿಯಿಂದ ಪಿಐಸಿಯುವಿನೊಳಗೆ ಹೊಕ್ಕರು.

'ಮಲಗುವುದಿಲ್ವಾ' ಅವನಲ್ಲಿ ನಾನು ಕೇಳಿದೆ. 'ಈ ಸೊಳ್ಳೆಯ ಬಾಯಿಯಿಂದ ಪಾರಾಗಿ ಮಲಗುವುದುಂಟಾ?' ಅವನು ಕೇಳಿದ. 'ತಗೊಳ್ಳಿ ಈ ಮುಲಾಮು. ಇದು ಹಚ್ಚಿಕೊಂಡು ಮಲಗಿದರೆ ಸೊಳ್ಳೆಯೇ ಚುಚ್ಚುವುದಿಲ್ಲ' ಎಂದು ಒಡೊಮಾಸು



ಮುಲಾಮು ಕೊಟ್ಟೆ. ಅವನು ಹಿಂಜರಿಯುತ್ತಲೇ ಸ್ವಲ್ಪವೇ ತೆಗೆದುಕೊಂಡು ಮೈಗೆ ತೆಳುವಾಗಿ ಹಚ್ಚಿ ಹತ್ತಿರದಲ್ಲೇ ಮಲಗಿಕೊಂಡ. ನನಗೆ ಮತ್ತೆ ನಿದ್ರೆ ಹತ್ತಿತ್ತು.

ಬೆಳಗಿನ ಅಲರಾಂ ಸದ್ದಿಗೆ ಎಚ್ಚರವಾದಾಗ ಹತ್ತಿರ ಮಲಗಿದ್ದವನು ಯಾವಾಗಲೋ ಎದ್ದು ಹೋಗಿದ್ದ. ನಾನು ಎದ್ದು ಮುಖ ತೊಳೆಯಲು ಬಾತ್ರೂಮಿಗೆಂದು ಹೋಗುವಷ್ಟರಲ್ಲಿ ಆ ಮಗುವಿನ ತಾಯಿ ಐಸಿಯುವಿನ ಹೊರಗೆ ಕುಳಿತು ಅಳುತ್ತಿದ್ದಳು. 'ಏನಾಯಿತು?' ಎಂದು ಕೇಳಿದೆ.

'ಮಗಳು ರಾತ್ರಿ ತೀರಿ ಹೋದಳು' ಕೆರೆಯಾದ ಕಣ್ಣುಗಳಲ್ಲೇ ಬಿಕ್ಕುತ್ತಾ ಹೇಳಿದಳು.

'ನಿಮ್ಮ ಗಂಡ ಎಲ್ಲಿ?' ಅಂತ ಕೇಳಿದೆ.

'ಅವರು ನಿನ್ನೆ ರಾತ್ರಿಯೇ ಪೊಲೀಸ್ ಸ್ಟೇಷನ್‌ಗೆ ಕೇಸು ಹಿಂತೆಗೆಯಲು ಹೋದರು' ಅಂದಳು.

ನನಗೆ ಏನೂ ಹೇಳಬೇಕೆಂದು ತಿಳಿಯಲಾಗದೆ ಉಕ್ಕಿ ಬರುವ ದುಃಖವನ್ನು ಅದುಮಿ ಹಿಡಿದು ಬಾತ್ರೂಂಗೆ ಓಡಿದೆ. ಪರಿಸ್ಥಿತಿ ನೆನೆದು ಜೋರಾಗಿ ಕೂಗಿ ಅರಚಬೇಕೆಂದೆನಿಸಿದರೂ ಗಂಟಲಿನಿಂದ ಸಣ್ಣ ಶಬ್ದವೂ ಹೊರಬರಲಿಲ್ಲ.

●